ದಿಃ 29.02.2024 OS.No.153/2017 PW-1

ದಿಃ 29.02.2024 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಹೆಚ್.ಎಸ್.ಹೆಚ್. ವಕೀಲರಿಂದ

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 2000 ನೇ ಇಸವಿಯಿಂದ ಗಣಕೀಕೃತ ಪಹಣಿ ಬರುತ್ತಿಲ್ಲ. ದಾವಾ ಸ್ವಲ್ಪಿಸುವ ಕಾಲದಲ್ಲಿಯೂ ಸಹ ಆ ರೀತಿ ಪಹಣಿ ಬರುತ್ತಿರಲಿಲ್ಲ. ಈ ವಿಚಾರವನ್ನು ವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಪಹಣಿ ಬರುತ್ತಿಲ್ಲವೆಂದು ಕಂದಾಯ ಅಧಿಕಾರಿಗಳ ಮುಂದೆ ಪ್ರಶ್ನೆ ಮಾಡಿರುತ್ತೇನೆ. ಆ ರೀತಿ ಪ್ರಶ್ನೇ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರುಪಸಿಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ.1 ರ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಸದರಿ ನಿಪಿ.1 ರಲ್ಲಿ ದಿಃ05.091960 ಎಂದು ಮತ್ತು ನನ್ನ ತಾತನ ಹೆಸರು ನಮೂದಿದೆ ಎಂದರೆ ಸರಿ.

ದಾವಾ ಸ್ವತ್ತಿನ ಸಂಪೂರ್ಣ 4 ಎಕರೆಗೆ ಚಕ್ಕುಬಂಧಿ ಪೂರ್ವಕ್ಕೆ ಬೆಟ್ಟ ಪಶ್ಚಿಮಕ್ಕೆ ಮಾರೇಗೌಡ ಈರೇಗೌಡರ ಜಮೀನು ಉತ್ತರಕ್ಕೆ ಮಾದೇಗೌಡರ ಜಮೀನು ದಕ್ಷಿಣಕ್ಕೆ ಸರ್ಕಾರಿ ಹಳ್ಳ ಇರುತ್ತದೆ. ಸದರಿ ಚಕ್ಕುಬಂದಿಯ ಸ್ವತ್ತನ್ನು 1974-74 ರಲ್ಲಿ ಮಾದೇಗೌಡರ ಮಗ ಈರೇಗೌಡ ರವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಈರೇಗೌಡ ಎಂದರೆ ನನ್ನ ದೊಡ್ಡಪ್ಪ ಆಗಿರುತ್ತಾರೆ ಸದರಿ ಈ ಮೇಲೆ ಹೇಳಿದ ಸ್ವತ್ತಿನಲ್ಲಿ ನನ್ನ ದೊಡ್ಡಪ್ಪ ಈರೇಗೌಡರೇ ಸ್ವಾಧೀನದಲ್ಲಿ ಇರುತ್ತಾರೆ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಸ್ವತ್ತುಗಳ ಸಂಪೂರ್ಣ ಮಾಲೀಕರು ಈ ಮೇಲೆ ಹೇಳಿದ ಈರೇಗೌಡರು ಆಗಿದ್ದು ಆದರೂ ನಾನು ದಾವಾ ಸ್ವತ್ತನ್ನು ಕಬಳಿಸಲು

ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮಾರೇಗೌಡರ ಹೆಸರನಲ್ಲಿ ಇರುವ ದಾಖಲೆಯನ್ನು ನಾನು ಹಾಜರುಪಡಿಸಲು ಸಾಧ್ಯವಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿಯ ಆಜುಬಾಜು ಸದರಿಯವರ ಸ್ವತ್ತು ಇಲ್ಲದ ಕಾರಣ ನಾನು ದಾಖಲೆಯನ್ನು ಹಾಜರುಪಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ನಾನು ಹಲವು ದಾವೆಗಳನ್ನು ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತೇನೆ ಎಂದರೆ ಸರಿ. ನಾನು ವಿಚಾರಣೆಯನ್ನು ಯಾವ ರೀತಿ ನೀಡಬೇಕು ಎಂದು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನನ್ನ ತಾತನ ಹೆಸರು ಕರೀಗೌಡ ಎಂಬುದನ್ನು ದುರುಪಯೋಗ ಪಡಿಸಿಕೊಂಡು ನಾನು ಹಲವು ಸುಳ್ಳು ದಾವೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ರಂಗನಾಥ ಎಂಬುವವರು ಚನ್ನಪಟ್ಟಣದ ತಹಶೀಲ್ದಾರ್ ಆಗಿ ಯಾವತ್ತೂ ಕಾರ್ಯ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ತಹಶೀಲ್ದಾರ್ ರವರ ಕಚೇರಿಯವರು ಪ್ರತಿವಾದಿಗೆ ಹಿಂಬರಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳು ನನ್ನದಲ್ಲ ಎಂದು ಗೊತ್ತಿದ್ದರೂ ಸಹ ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಹಕ್ಕು ನನ್ನ ತಾತನಿಗಾಗಲೀ ಅಥವಾ ನಮ್ಮ ವಂಶಸ್ಥರಿಗಾಗಲೀ ಇಲ್ಲವೆಂದು ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.